10) **<u>ದೇಹದಾರ್ಡ್ಯತೆ ಪರೀಕ್ಷೆ (Physical Standard Test):</u>**

**ಪರೀಕ್ಷೆಗಳ ದಿನಾಂಕವನ್ನು ಮುಂದೆ ಜಾಹೀರಾತು ಪಡಿಸಲಾಗುವುದು ಹಾಗೂ ಅಗ್ನಿಶಾಮಕ ಇಲಾಖೆಯ ವೆಬ್‌ಸೈಟ್ www.ksp.gov.in ನಲ್ಲಿ ಪ್ರಕಟಿಸಲಾಗುವುದು. ಮತ್ತು ದೇಹದಾರ್ಡ್ಯತೆ ಪರೀಕ್ಷೆಯ ದಿನಾಂಕ, ಸಮಯ ಮತ್ತು ಸ್ಥಳವನ್ನು ಹೊಂದಿರುವ ಪ್ರವೇಶ/ಕರೆಪತ್ರಗಳನ್ನು ಅಗ್ನಿಶಾಮಕ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಿಂದ ಅಭ್ಯರ್ಥಿಗಳು ಕಡ್ಡಾಯವಾಗಿ ಅಂತರ್‌ಜಾಲದ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬೇಕು. ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಪ್ರತ್ಯೇಕವಾಗಿ ರವಾನಿಸಲಾಗುವುದಿಲ್ಲ. ಪ್ರವೇಶ ಪತ್ರವಿಲ್ಲದೇ ಪಿ.ಎಸ್.ಟಿ. ಪರೀಕ್ಷೆಗಳಿಗೆ ಅನುವು ಮಾಡಲಾಗುವುದಿಲ್ಲ. ಈ ಸಂಬಂಧ ಅಭ್ಯರ್ಥಿಗಳು ಮುಖ್ಯವಾಗಿ ಈ ಕಛೇರಿಯ ಅಧೀಕೃತ ವೆಬ್‌ಸೈಟ್ "www.ksp.gov.in" ನ್ನು ಮೇಲಿಂದ ಮೇಲೆ ಗಮನಿಸುತ್ತಿರುವುದು ಸೂಕ್ತ.**

10.1) ಅಭ್ಯರ್ಥಿಗಳಿಗೆ ದೇಹದಾರ್ಡ್ಯತೆ ಪರೀಕ್ಷೆಯನ್ನು ನೇಮಕಾತಿ ಪ್ರಾಧಿಕಾರ ನಿಗದಿಪಡಿಸಿದ ಕೇಂದ್ರಗಳಲ್ಲಿ ನಡೆಸಲಾಗುವುದು. ಆಯ್ಕೆ ಸಮಿತಿಯು ಯಾವುದೇ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸುವ ಅಥವಾ ಹೊಸದಾಗಿ ಸೇರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ. ಆದ್ದರಿಂದ ಅಭ್ಯರ್ಥಿಗಳು ಇಲಾಖೆಯ ವೈಬ್‌ಸೈಟ್‌ನ್ನು ದಿನನಿತ್ಯ ನೋಡಲು ತಿಳಿಸಲಾಗಿದೆ.

10.2) ದೈಹಿಕ ಪರೀಕ್ಷೆಯು ನಡೆಯುವ ವೇಳೆ ಮತ್ತು ಸ್ಥಳವನ್ನು ಸಂಬಂಧಪಟ್ಟ ದೈಹಿಕ ಪರೀಕ್ಷೆಯ ಕೇಂದ್ರಗಳ ಸೂಚನಾ ಫಲಕದಲ್ಲಿಯೂ ಸಹ ಪ್ರಕಟಿಸಲಾಗುವುದು. ಕರೆಪತ್ರವನ್ನು ಪಡೆಯದೆ ಪರೀಕ್ಷೆಗೆ ಹಾಜರಾದಲ್ಲಿ ಅಂತಹವರಿಗೆ ದೈಹಿಕ ಪರೀಕ್ಷೆಗೆ ಅವಕಾಶ ನೀಡಲಾಗುವುದಿಲ್ಲ.

10.3) **ಅಭ್ಯರ್ಥಿಗಳು ದೈಹಿಕ ಪರೀಕ್ಷೆಗೆ ಬರುವಾಗ ಕಡ್ಡಾಯವಾಗಿ ನಿಗದಿಪಡಿಸಿದ, ಮೂಲ ಅಂಕಪಟ್ಟಿ, ಮೀಸಲಾತಿ ಕೋರಿರುವ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಜರಾಗುವುದು.**

**10.4) ಅಭ್ಯರ್ಥಿಗಳು ದೇಹದಾರ್ಡ್ಯತೆ ಪರೀಕ್ಷೆಗೆ ಬರುವಾಗ, ಕರೆಪತ್ರದ ಜೊತೆಗೆ ಈ ಕೆಳಕಂಡ ಯಾವುದಾದರೊಂದು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.**

1) ಪಾಸ್‌ಪೋರ್ಟ್ (Passport)
2) ಚಾಲನಾ ಪರವಾನಗಿ ಪತ್ರ (Driving License)
3) ಪ್ಯಾನ್ ಕಾರ್ಡ್ (PAN Card)
4) ರಾಜ್ಯ ಸರ್ಕಾರ/ ಕೇಂದ್ರ ಸರ್ಕಾರ / ಸಾರ್ವಜನಿಕ ಸ್ವಾಮ್ಯದ ಅಥವಾ ಸರ್ಕಾರದ ಅಧೀನಕ್ಕೊಳಪಟ್ಟ ಖಾಸಗೀ ಕಂಪನಿಗಳು ವಿತರಿಸಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿ (Service ID Card)
5) ಸಾರ್ವಜನಿಕ ಬ್ಯಾಂಕುಗಳು / ಅಂಚೆ ಕಛೇರಿಗಳು ವಿತರಿಸಿರುವ ಭಾವಚಿತ್ರವಿರುವ ಪಾಸ್ ಪುಸ್ತಕ (Bank Pass Book with Photograph)
6) ಭಾವಚಿತ್ರ ಸಮೇತ ನೋಂದಣಿಯಾಗಿರುವ ಸ್ವತ್ತಿನ ದಾಖಲೆಪತ್ರ ಅಥವಾ ಪಟ್ಟಾ ಪುಸ್ತಕ (Pattas and registered deeds with Photograph)
7) ಭಾವಚಿತ್ರ ಸಮೇತ ಸಂಬಂಧಪಟ್ಟ ಪ್ರಾಧಿಕಾರಿಯವರು ವಿತರಿಸಿರುವ ಜಾತಿ ಪ್ರಮಾಣ ಪತ್ರ (Caste Certificate with Photo)
8) ಮಾಜಿ ಸೈನಿಕ ಅಭ್ಯರ್ಥಿಗಳಿಗೆ ವಿತರಿಸಿರುವ ಪಿಂಚಣಿ ಪುಸ್ತಕ / ಪಿಂಚಣಿ ಮಂಜೂರಾತಿ ಆಗಿರುವ ಆದೇಶ (Ex-servicemen's pension book/pension payment order)
9) ಎನ್.ಆರ್.ಇ.ಜಿ.ಎಸ್.ಯಿಂದ ನೀಡಿದ ಭಾವಚಿತ್ರವಿರುವ ಉದ್ಯೋಗ ಚೀಟಿ. (Job cards with Photograph)
10) ಎಲೆಕ್ಟ್ರೋಲ್ ಪೋಟೋ ಗುರುತಿನ ಚೀಟಿ (EPIC).
11) ಭಾರತೀಯ ಗುರುತು ಪ್ರಾಧಿಕಾರದಿಂದ ನೀಡಲಾಗಿರುವ ಆಧಾರ್ ಕಾರ್ಡ್. (AADHAR CARD).

10.5) ಕರೆಪತ್ರದ ಜೊತೆಗೆ ಆನ್‌ಲೈನ್ ಮುಖಾಂತರ ಸಲ್ಲಿಸಿದ ಅರ್ಜಿಯ ಜೆರಾಕ್ಸ್ ಪ್ರತಿಯನ್ನು ಸಹ ತರತಕ್ಕದ್ದು, ತಪ್ಪಿದ್ದಲ್ಲಿ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ. ನಿಗಧಿತದಿನಾಂಕ ಹಾಗೂ ಸಮಯದಲ್ಲಿ ಹಾಜರಾಗದಿದ್ದರೆ ಅಂತಹವರನ್ನು ಅನರ್ಹಗೊಳಿಸಲಾಗುವುದು ಹಾಗೂ ಬದಲಿ ದಿನಾಂಕವನ್ನು ನೀಡಲಾಗುವುದಿಲ್ಲ.

10.6) ಅರ್ಜಿದಾರನು ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ (ವೃಂದ ಮತ್ತು ನೇಮಕಾತಿ) ನಿಯಮಗಳು 2013ರಲ್ಲಿನ ಅಪೆಂಡಿಕ್ಸ್-'ಎ' ಯಲ್ಲಿರುವಂತೆ ಈ ಕೆಳಕಂಡ ದೇಹದಾರ್ಡ್ಯತೆ ಹೊಂದಿರಬೇಕು.

**<u>ಅಪೆಂಡಿಕ್ಸ್(ಎ) ದೇಹದಾರ್ಡ್ಯತೆ ಪರೀಕ್ಷೆ</u>**

| | | |
|---|---|---|
| 1 | ಎತ್ತರ | ಕನಿಷ್ಠ 168 ಸೆಂ.ಮೀ. |
| 2 | ಎದೆ ಸುತ್ತಳತೆ | ಕನಿಷ್ಠ 81 ಸೆಂ.ಮೀ ವಿಸ್ತಾರಗೊಂಡ ನಂತರ ಕನಿಷ್ಠ 5 ಸೆಂ.ಮೀ ಅಂದರೆ 86 ಸೆಂ.ಮೀ ಗೆ ಕಡಿಮೆ ಇಲ್ಲದಂತೆ. |
| 3 | ತೂಕ | ಕನಿಷ್ಠ 50 ಕೆ.ಜಿ. |
| 4 | ಅನರ್ಹತೆಗಳು | ಬಾಗಿದ ಕಾಲು, ತಾಗು ಮಂಡಿ, ಚಪ್ಪಟೆ ಪಾದ ಹೊಂದಿದ ಅಭ್ಯರ್ಥಿಗಳು ಅನರ್ಹರಾಗುವರು. |

10.7) ಅಪೆಂಡಿಕ್ಸ್ (ಎ)ನಲ್ಲಿ ನಿಗದಿಪಡಿಸಿದಂತೆ ದೇಹದಾರ್ಢ್ಯತೆ ಪರೀಕ್ಷೆಯನ್ನು ನಡೆಸಲಾಗುವುದು. ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ವೃಂದ ಮತ್ತು ನೇಮಕಾತಿ ನಿಯಮ 2013 ರ ಅನ್ವಯ SSLC (**10 ನೇ ತರಗತಿ**) ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಶೇಕಡಾ **1:5** ರ ಅನುಪಾತದಲ್ಲಿ ಎಲ್ಲಾ ಹುದ್ದೆಗಳ ದೇಹದಾರ್ಢ್ಯತೆ ಪರೀಕ್ಷೆಗೆ ಕರೆಯಲಾಗುವುದು.

11) **ದೈಹಿಕ ಸಾಮರ್ಥ್ಯ ಪರೀಕ್ಷೆ: (Physical Fitness Test):**

ದೇಹದಾರ್ಢ್ಯತೆ ಪರೀಕ್ಷೆಯಲ್ಲಿ ಅರ್ಹಗೊಳ್ಳುವ ಅಭ್ಯರ್ಥಿಗಳಿಗೆ ಮಾತ್ರ ಈ ಕೆಳಕಂಡ ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಲಾಗುವುದು.

**11.1) ಅಗ್ನಿಶಾಮಕರಿಗೆ**

| ಅಂಶಗಳು | ಅರ್ಹತಾ ವೇಳೆ/ದೂರ | |
|---|---|---|
| | ಸಾಮಾನ್ಯ ಅಭ್ಯರ್ಥಿಗಳಿಗೆ | ಮಾಜಿ ಸೈನಿಕ ಅಭ್ಯರ್ಥಿಗಳಿಗೆ |
| 100 ಮೀಟರ್ ಓಟ | 15 ಸೆಕೆಂಡಗಳಲ್ಲಿ | 20 ಸೆಕೆಂಡಗಳಲ್ಲಿ |
| 100 ಮೀಟರ್ ಓಟ ಬೆನ್ನಿನಲ್ಲಿ 22 ಕೆಜಿ ಭಾರದೊಂದಿಗೆ | 25 ಸೆಕೆಂಡಗಳಲ್ಲಿ | 32 ಸೆಕೆಂಡಗಳಲ್ಲಿ |
| 22ಕೆ.ಜಿ ಭಾರವನ್ನು ಬೆನ್ನಿನಲ್ಲಿ ಹೊತ್ತು 20 ಅಡಿ ಎತ್ತರದ ವರಗೆ ಏಣಿ ಹತ್ತುವುದು. | 20 ಸೆಕೆಂಡಗಳಲ್ಲಿ | 25 ಸೆಕೆಂಡಗಳಲ್ಲಿ |
| ಗುಂಡೆಸತ(7.26 ಕಿಲೋ) (ಸಾಮಾನ್ಯ ಅಭ್ಯರ್ಥಿಗಳಿಗೆ) | ಕನಿಷ್ಟ 5.60 ಮೀಟರ್ ಮೂರು ಪ್ರಯತ್ನದಲ್ಲಿ | |
| ಗುಂಡೆಸತ(4 ಕಿಲೋ) (ಮಾಜಿಸೈನಿಕ ಅಭ್ಯರ್ಥಿಗಳಿಗೆ) | | ಕನಿಷ್ಟ 3.75 ಮೀಟರ್ ಮೂರು ಪ್ರಯತ್ನದಲ್ಲಿ |
| 800 ಮೀಟರ್ ಓಟ(ಸಾಮಾನ್ಯ ಅಭ್ಯರ್ಥಿಗಳಿಗೆ) | 2 ನಿಮಿಷ 50 ಸೆಕೆಂಡಗಳಲ್ಲಿ | |
| 400 ಮೀಟರ್ ಓಟ (ಮಾಜಿಸೈನಿಕ ಅಭ್ಯರ್ಥಿಗಳಿಗೆ) | | 2 ನಿಮಿಷ 50 ಸೆಕೆಂಡಗಳಲ್ಲಿ |

**ಟಿಪ್ಪಣಿ:**

1) ಅಭ್ಯರ್ಥಿಗಳು ಅರ್ಹಗೊಳ್ಳಲು ಮೇಲಿನ 5 ದೈಹಿಕ ಸಾಮರ್ಥ್ಯ ಪರೀಕ್ಷೆಗಳ ಪೈಕಿ ಕನಿಷ್ಠ 3 ರಲ್ಲಿ ಉತ್ತೀರ್ಣರಾಗಬೇಕು. ಪ್ರತಿಯೊಂದು ದೈಹಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ 20 ಅಂಕಗಳನ್ನು ನೀಡಲಾಗುವುದು. ಅದರಂತೆ 3, 4 ಹಾಗೂ 5 ದೈಹಿಕ ಸಾಮರ್ಥ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಅಭ್ಯರ್ಥಿಗಳಿಗೆ ಅನುಕ್ರಮವಾಗಿ 60, 80 ಹಾಗೂ 100 ಅಂಕಗಳನ್ನು ನೀಡಲಾಗುವುದು. ದೈಹಿಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಹಾಗೂ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಶೇಕಡಾವಾರು ಅಂಕಗಳ ಜೊತೆ ಸೇರಿಸಿ ಆಯ್ಕೆಯ ಮೆರಿಟ್ ಪಟ್ಟಿಯನ್ನು ತಯಾರಿಸುವಾಗ ಪರಿಗಣಿಸಲಾಗುವುದು.
2) ಈ ಅರ್ಹತಾ ಪಟ್ಟಿಯಿಂದ ಪ್ರತಿ ವರ್ಗದಲ್ಲಿ ಅಧಿಸೂಚಿತ ಖಾಲಿ ಇರುವ ಹುದ್ದೆಗಳಿಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು 1:1 ರ ಪ್ರಮಾಣದಲ್ಲಿ ಚಾಲ್ತಿಯಲ್ಲಿರುವ ಸರ್ಕಾರದ ಆದೇಶ / ನಿಯಮನಾನುಸಾರ ತಯಾರಿಸಲಾಗುವುದು.
3) ದೈಹಿಕ ಸಾಮರ್ಥ್ಯ ಪರೀಕ್ಷೆ ಮುಗಿದ ನಂತರ ಸಮಿತಿಯ ಮುಂದೆ ತಮ್ಮ ಸಾಧನೆಯ ಬಗ್ಗೆ ಪ್ರಮಾಣ ಪತ್ರಕ್ಕೆ ಅಭ್ಯರ್ಥಿಯು ಸಹಿ ಹಾಕಲೇಬೇಕು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳು ಅನರ್ಹಗೊಳಗಾಗುವರು.
4) ಅಭ್ಯರ್ಥಿಗಳು ಯಾವುದೇ ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಗೈರು ಹಾಜರಾದಲ್ಲಿ ಅವರನ್ನು ಅನರ್ಹರೆಂದು ಪರಿಗಣಿಸಲಾಗುವುದು.

**11.2) ಅಗ್ನಿಶಾಮಕ ಚಾಲಕ ಮತ್ತು ಚಾಲಕ ತಂತ್ರಜ್ಞರಿಗೆ:**

| ಅಂಶಗಳು | ಅರ್ಹತಾ ವೇಳೆ/ದೂರ | |
|---|---|---|
| | ಸಾಮಾನ್ಯ ಅಭ್ಯರ್ಥಿಗಳಿಗೆ | ಮಾಜಿ ಸೈನಿಕ ಅಭ್ಯರ್ಥಿಗಳಿಗೆ |
| 100 ಮೀಟರ್ ಓಟ | 15 ಸೆಕೆಂಡಗಳಲ್ಲಿ | 20 ಸೆಕೆಂಡಗಳಲ್ಲಿ |
| 100 ಮೀಟರ್ ಓಟ ಬೆನ್ನಿನಲ್ಲಿ 22 ಕೆಜಿ ಭಾರದೊಂದಿಗೆ | 25 ಸೆಕೆಂಡಗಳಲ್ಲಿ | 32 ಸೆಕೆಂಡಗಳಲ್ಲಿ |
| 22ಕೆ.ಜಿ ಭಾರವನ್ನು ಬೆನ್ನಿನಲ್ಲಿ ಹೊತ್ತು 20 ಅಡಿ ಎತ್ತರದ ವರಗೆ ಏಣಿ ಹತ್ತುವುದು. | 20 ಸೆಕೆಂಡಗಳಲ್ಲಿ | 25 ಸೆಕೆಂಡಗಳಲ್ಲಿ |

| | | |
|---|---|---|
| ಗುಂಡೆಸತ(7.26 ಕಿಲೋ)<br>(ಸಾಮಾನ್ಯ ಅಭ್ಯರ್ಥಿಗಳಿಗೆ) | ಕನಿಷ್ಠ 5.60 ಮೀಟರ್ ಮೂರು ಪ್ರಯತ್ನದಲ್ಲಿ | |
| ಗುಂಡೆಸತ(4 ಕಿಲೋ) (ಮಾಜಿಸೈನಿಕ ಅಭ್ಯರ್ಥಿಗಳಿಗೆ) | | ಕನಿಷ್ಠ 3.75 ಮೀಟರ್ ಮೂರು ಪ್ರಯತ್ನದಲ್ಲಿ |
| 800 ಮೀಟರ್ ಓಟ(ಸಾಮಾನ್ಯ ಅಭ್ಯರ್ಥಿಗಳಿಗೆ) | 2 ನಿಮಿಷ 50 ಸೆಕೆಂಡಗಳಲ್ಲಿ | |
| 400 ಮೀಟರ್ ಓಟ<br>(ಮಾಜಿಸೈನಿಕ ಅಭ್ಯರ್ಥಿಗಳಿಗೆ) | | 2 ನಿಮಿಷ 50 ಸೆಕೆಂಡಗಳಲ್ಲಿ |

**ಟಿಪ್ಪಣಿ:**

1) ಅಗ್ನಿಶಾಮಕ ಚಾಲಕ ಮತ್ತು ಚಾಲಕ ತಂತ್ರಜ್ಞ ಅಭ್ಯರ್ಥಿಗಳು ಅರ್ಹಗೊಳ್ಳಲು ಮೇಲಿನ 5 ದೈಹಿಕ ಸಾಮರ್ಥ್ಯ ಪರೀಕ್ಷೆಗಳಲ್ಲಿ ಕನಿಷ್ಠ 3 ರಲ್ಲಿ ಉತ್ತೀರ್ಣರಾಗಬೇಕು. ದೈಹಿಕ ಸಾಮರ್ಥ ಪರೀಕ್ಷೆಗೆ ಅಂಕಗಳನ್ನು ನೀಡಲಾಗುವುದಿಲ್ಲ. ಇವು ಕೇವಲ ಅರ್ಹತೆಗೆ ಮಾತ್ರ ಸೀಮಿತವಾಗಿರುತ್ತದೆ.
2) ದೈಹಿಕ ಸಾಮರ್ಥ್ಯ ಪರೀಕ್ಷೆ ಮುಗಿದ ನಂತರ ಸಮಿತಿಯ ಮುಂದೆ ತಮ್ಮ ಸಾಧನೆಯ ಬಗ್ಗೆ ಪ್ರಮಾಣ ಪತ್ರಕ್ಕೆ ಅಭ್ಯರ್ಥಿಯು ಸಹಿ ಹಾಕಲೇಬೇಕು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳು ಅನರ್ಹಗೊಳಗಾಗುವರು.
3) ಅಗ್ನಿಶಾಮಕ ಚಾಲಕ ಮತ್ತು ಚಾಲಕ ತಂತ್ರಜ್ಞ ಹುದ್ದೆಗೆ ಮೇಲೆ ನಿಗಧಿಪಡಿಸಿರುವ 5 ದೈಹಿಕ ಪರೀಕ್ಷೆಗಳಲ್ಲಿ **ಕನಿಷ್ಠ 3 ದೈಹಿಕ ಪರೀಕ್ಷೆಗಳಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು ಮಾತ್ರ ವಿವಿಧ ವಾಹನ ಚಾಲನಾ ಪರೀಕ್ಷೆಗೆ ಹಾಜರಾಗಲು ಅರ್ಹತೆ ಹೊಂದುತ್ತಾರೆ.**
4) ಅಭ್ಯರ್ಥಿಗಳು ಯಾವುದೇ ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಗೈರು ಹಾಜರಾದಲ್ಲಿ ಅವರನ್ನು ಅನರ್ಹರೆಂದು ಪರಿಗಣಿಸಲಾಗುವುದು.

12) **ಅಗ್ನಿಶಾಮಕ ಚಾಲಕ ಹಾಗೂ ಚಾಲಕ ತಂತ್ರಜ್ಞರಿಗೆ ವಿವಿಧ ವಾಹನ ಚಾಲನಾ ಪರೀಕ್ಷೆ:**

ಅಗ್ನಿಶಾಮಕ ಚಾಲಕ ಮತ್ತು ಚಾಲಕ ತಂತ್ರಜ್ಞ ಹುದ್ದೆಯ ನೇಮಕಾತಿ ಸಮಿತಿಯು ವಿವಿಧ ವಾಹನ ಚಾಲನಾ ಪರೀಕ್ಷೆಯನ್ನು ನಡೆಸಬೇಕಿದ್ದು, ನೇಮಕಾತಿ ಪ್ರಾಧಿಕಾರದ ಸಹಮತಿಯೊಂದಿಗೆ ವಿವಿಧ ಚಾಲನಾ ಪರೀಕ್ಷೆಯ ರೂಪು-ರೇಷೆಗಳನ್ನು ತೀರ್ಮಾನಿಸಲಾಗುವುದು. ಚಾಲನಾ ಪರೀಕ್ಷೆಗೆ 100 ಅಂಕಗಳನ್ನು ನಿಗಧಿಪಡಿಸಲಾಗಿದೆ. ಚಾಲನಾ ಪರೀಕ್ಷೆಯಲ್ಲಿ ಗಳಿಸಿದ

ಅಂಕಗಳನ್ನು ಹಾಗೂ ಎಸ್ಎಸ್ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಶೇಕಡಾವಾರು ಅಂಕಗಳ ಜೊತೆ ಸೇರಿಸಿ ಆಯ್ಕೆಯ ಮೆರಿಟ್ ಪಟ್ಟಿಯನ್ನು ತಯಾರಿಸಲಾಗುವುದು. ಈ ಅರ್ಹತಾ ಪಟ್ಟಿಯಿಂದ ಪ್ರತಿ ವರ್ಗದಲ್ಲಿ ಅಧಿಸೂಚಿತ ಖಾಲಿ ಇರುವ ಹುದ್ದೆಗಳಿಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು 1:1 ರ ಪ್ರಮಾಣದಲ್ಲಿ ಚಾಲ್ತಿಯಲ್ಲಿರುವ ಸರ್ಕಾರದ ಆದೇಶ / ನಿಯಮನಾನುಸಾರ ತಯಾರಿಸಲಾಗುವುದು. ಐಟಿಐ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಅಂತಿಮ ಆಯ್ಕೆಯಲ್ಲಿ ಪರಿಗಣಿಸಲಾಗುವುದಿಲ್ಲ. ಅದು ಕೇವಲ ಅರ್ಹತೆಯನ್ನು ದೃಡೀಕರಿಸಲು ಮಾತ್ರ ಪರಿಗಣಿಸಲಾಗುವುದು.

**ಟಿಪ್ಪಣಿ:**

ಅಗ್ನಿಶಾಮಕ, ಅಗ್ನಿಶಾಮಕ ಚಾಲಕ ಮತ್ತು ಚಾಲಕ ತಂತ್ರಜ್ಞ ಹುದ್ದೆಗಳಿಗೆ ಬೇಕಾದ ದೇಹದಾರ್ಢ್ಯತೆಯನ್ನು ನೇಮಕಾತಿ ಸಮಿತಿಯು ನಿರ್ಧರಿಸುತ್ತದೆ. ಯಾವುದೇ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ದೇಹದಾರ್ಢ್ಯತೆಯನ್ನು ಪರಿಗಣಿಸಲಾಗುವುದಿಲ್ಲ.